## ಆದಿಮಾನವನ ಪ್ರತಿಮೆ

ಕೋಟೆಗಳ ನಾಡು ರಾಜಸ್ಥಾನವು ಹಲವು ವೈರುಧ್ಯಗಳ ನೆಲೆವೀಡು ಸಹ. ಇಲ್ಲಿನ ಉದಯಪುರ ನಗರದಲ್ಲಿ ಸುಮಾರು 450 ವರ್ಷಗಳಷ್ಟು ಪ್ರಾಚೀನವಾದ ಅರಮನೆಯೊಂದಿದೆ. ಇದು ಮೇವಾಡ ಸಾಮ್ರಾಟರ ಆವಾಸಸ್ಥಾನವಾಗಿತ್ತು ಎನ್ನುತ್ತದೆ ಇತಿಹಾಸ. ಪಿಚೋಲ ಸರೋವರದ ದಂಡೆಯಲ್ಲಿರುವ ಈ ಭವ್ಯ ಅರಮನೆಗೆ ಹೊಂದಿಕೊಂಡಂತೆಯೇ ಪ್ಯಾಲೇಸ್ ಮ್ಯೂಸಿಯಂ ಸಹ ಇದೆ. ಇದರಲ್ಲಿ ರಾಜಪರಂಪರೆಗೆ ಸೇರಿದ ತೈಲಚಿತ್ರಗಳು, ಶಿಲ್ಪಗಳು, ವಿವಿಧ ಆಯುಧಗಳು ಮತ್ತು ಕಲಾತ್ಮಕವಾದ ವಸ್ತುಗಳೇ ತುಂಬಿವೆ. ಈ ಚಿತ್ರದಲ್ಲಿ ಕಾಣುತ್ತಿರುವ ಆದಿಮಾನವ ಪ್ರತಿಮೆಯೂ ಅಲ್ಲಿಯದ್ದೇ. ಕಂಚಿನಿಂದ ರೂಪಿಸಿರುವ ಈ ಪ್ರತಿಮೆಯು ಆಕರ್ಷಕವಾಗಿದ್ದು, ಮ್ಯೂಸಿಯಂಗೆ ಹೋಗುವವರ ಗಮನಸೆಳೆಯುತ್ತದೆ.

—ಪ್ರಭಾ ಪ್ರಸಾದ್, ಬೆಂಗಳೂರು





## ಅರಣ್ಯಾಧಿಕಾರಿ ಕಂಡ ಎರಡು ಮೊಟ್ಟೆಗಳ ಕಥೆ

ಅದೆಷ್ಟು ಅವಸರವಿತ್ತೋ ಈ ಹಕ್ಕಿಗೆ ಮೊಟ್ಟೆಗಳನ್ನಿಡಲು? ಅದೇನು ಕಾರಣವಿತ್ತೋ, ಸುರಕ್ಷಿತವಲ್ಲದ ಸ್ಥಳದಲ್ಲಿ ಮೊಟ್ಟೆಗಳನ್ನಿಡಲು? ಗೊತ್ತಿಲ್ಲ. ಸಾಮಾನ್ಯವಾಗಿ ಹಕ್ಕಿಗಳು ಮೊಟ್ಟೆಯಿಟ್ಟು, ಮರಿ ಮಾಡಲು ಬಹಳ ಸುರಕ್ಷಿತ ತಾಣಗಳನ್ನು ಜಾಣತನದಿಂದ ಆಯ್ಕೆ ಮಾಡುತ್ತವೆ. ಆದರೆ ನಾವು ಕಂಡ ಬೆಳವನ ಹಕ್ಕಿ (ಚೋರೆ ಹಕ್ಕಿ) ಕೊಂಚ ಭಿನ್ನ. ಯಾವುದೇ ಚೋರರ ಭಯವಿಲ್ಲದೆ, ಕಡೂರಿನ ಬಾಸೂರು ಕಾವಲಿನ ವೀಕ್ಷಣಾ ಗೋಪುರದಲ್ಲಿ ಎರಡು ಮೊಟ್ಟೆಗಳನ್ನಿಟ್ಟು ಅದಾಗಲೇ ಹಾರಿತ್ತು. ಎಂದಿನಂತೆ ಅತ್ತ ಸುಳಿದ ನಮಗೆ ಗೋಪುರದ ಮೆಟ್ಟಿಲುಗಳ ಮೇಲಿನ ಕಬ್ಬಿಣದ ಸಲಾಕೆಗಳ ಮಧ್ಯೆ, ಹುಲ್ಲಿನ ಗರಿಗಳನ್ನು ಕೂಡಿಟ್ಟು ಮೊಟ್ಟೆಗಳನ್ನು ಇಟ್ಟಿರುವುದು ಕಂಡಿತು.

ಇಷ್ಟು ಬಟಾಬಯಲಿನಲ್ಲಿ, ಅದರಲ್ಲೂ ವೀಕ್ಷಣಾ ಗೋಪುರದ ಮೆಟ್ಟಿಲುಗಳ ಮೇಲೆ ಮೊಟ್ಟೆಗಳನ್ನು ಇಟ್ಟದ್ದು, ನಮಗೆ ಬಹಳ ಸೋಜಿಗವೆನಿಸಿ, ಕೂಡಲೇ ಕಾರ್ಯಪ್ರವೃತ್ತರಾದೆವು. ಹಕ್ಕಿಯ ಮೊಟ್ಟೆಗಳಿಗೆ ಕಾವು ಕೊಟ್ಟು, ಮರಿ ಮಾಡಲು ಅನುವು ಮಾಡಿಕೊಡಲೆಂದು ಮುಳ್ಳಿನ ಕಂಟಿಗಳನ್ನು ಗೋಪುರದ ಪ್ರವೇಶ ದ್ವಾರಕ್ಕೆ ಅಡ್ಡಲಾಗಿ ಇಟ್ಟು ಯಾರೂ ಅತ್ತ ಸುಳಿಯದಂತೆ ಮಾಡಿದೆವು. ಪುಟ್ಟ ಹಕ್ಕಿ ಮರಿಗಳ ಕಲರವದ ಕನಸು ಕಾಣುತ್ತಿದ್ದ ನಾವು ಎರಡು ದಿನಗಳ ನಂತರ ಅಲ್ಲಿಗೆ ಹೋಗಿ ನೋಡಿ ನಿರಾಸೆಗೊಂಡೆವು. ಅಲ್ಲಿ ಮೊಟ್ಟೆಗಳೂ ಇರಲಿಲ್ಲ, ಮರಿಗಳೂ ಇರಲಿಲ್ಲ. ಮರಿಗಳೊಂದಿಗೆ ಹಕ್ಕಿ ಹಾರಿದೆ ಅಂದುಕೊಳ್ಳೋಣವೆಂದರೆ ಅಲ್ಲಿ ಮೊಟ್ಟೆಗಳ ಸಿಪ್ಪೆಯೂ ಇರಲಿಲ್ಲ. ಆ ಮೊಟ್ಟೆಗಳು ಬಹುಶಃ ಕಾಡುಪ್ರಾಣಿಗಳ ಹೊಟ್ಟೆ ತುಂಬಿರಬೇಕೆಂದು ಬೇಸರಗೊಂಡೆವು. ಒಂದು ವೇಳೆ ಮೊಟ್ಟೆಗಳು ಬೇರೆ ಕಾಡುಪ್ರಾಣಿಗಳ ಹೊಟ್ಟೆ ತುಂಬಿಸಿದ್ದರೆ ಅದು ಪ್ರಕೃತಿಯ ನಿಯಮ.

—ಲೋಕೇಶ, ಬಿ.ಸಿ., ಕಡೂರು





## ಬನವಾಸಿ ಡಿಜಿಟಲ್ ವೃಕ್ಷೋದ್ಯಾನ

ಕದಂಬರ ರಾಜಧಾನಿ ಬನವಾಸಿ. ಈ ಸ್ಥಳಕ್ಕೆ ಐತಿಹಾಸಿಕ ಮಹತ್ವವಿದೆ. ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿಯ ದಾಸನಕೊಪ್ಪ ಮಾರ್ಗದಂಚಿನ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನವನ್ನು ವಿಭಿನ್ನವಾಗಿ ರೂಪಿಸಲಾಗಿದೆ. ಕದಂಬರ ನಡಿಗೆ ಎಂದು ಹೆಸರಿಟ್ಟು ನಡಿಗೆಪಥ ನಿರ್ಮಿಸಲಾಗಿದೆ. ವಾಕಿಂಗ್ ಪಥದಂಚಿನುದ್ದಕ್ಕೂ ಕದಂಬರ ರಾಜಧಾನಿಯ ಇತಿಹಾಸದ ಮಾಹಿತಿಯುಳ್ಳ 14ಕ್ಕೂ ಹೆಚ್ಚು ಬೋರ್ಡ್‌ಗಳನ್ನು ಹಾಕಲಾಗಿದೆ. ಈ ಬೋರ್ಡ್‌ಗಳಲ್ಲಿ ಕದಂಬರ ಐತಿಹಾಸಿಕ ಮಾಹಿತಿಯಿದೆ. ಕದಂಬೋತ್ಸವ, ಕದಂಬ ಮರದವಿವರವನ್ನು ಚಿತ್ರಸಹಿತ ನೀಡಲಾಗಿದೆ. ಇದಕ್ಕೆ ಡಿಜಿಟಲ್ ಟಚ್ ನೀಡಲಾಗಿದ್ದು, ಈ ಎಲ್ಲ ಬೋರ್ಡ್‌ಗಳಲ್ಲೂ ಕ್ಯೂಆರ್ ಕೋಡ್ ಇದೆ. ಸ್ಕ್ಯಾನ್ ಮಾಡಿದೊಡನೆ ಮತ್ತಷ್ಟು ಮಾಹಿತಿ ತೆರೆದುಕೊಳ್ಳುತ್ತದೆ.

—ಆಶಾ ಕೆರೆಗದ್ದೆ, ಶಿರಸಿ